**ನನ್ನ ಹೆಸರು ಸತ್ಯಪ್ರಿಯ ಆದರೂ ಸತ್ಯಾ, ಪ್ರಿಯಾ, ಸತ್ರಿ, ಸತ್ತು ಹೀಗೆಲ್ಲ ಕರೆಸಿಕೊಳ್ಳುತ್ತಿದ್ದೆ. ಹೆಸರಲ್ಲೇನಿದೆ? ಇವೆಲ್ಲಕ್ಕೂ ಹೂಂಗುಟ್ಟುತ್ತಿದ್ದೆ; ಗಿರಿಜೆಯೂ ಅಂಥ ಚುರುಕು ಇಲ್ಲ ಅಲ್ವಾ? ನಿಜ, ಆದರೆ ಅವಳ ತವರು ಮನೆಯವರ ಸಹಾಯದಿಂದ ಇರೋಕ್ಕೆ ಈ ಪುಟ್ಟ ಸೂರು ಇಲ್ಲದಿದ್ದರೆ ಈ ಮನುಷ್ಯನನ್ನು ಕಟ್ಕೊಂಡು ಇನ್ನೆಷ್ಟು ಏಗಬೇಕಿತ್ತೋ? ಗಿರಿಜೆಯ ಮನೆ ಮುಂದೆ ಪೆಂಡಾಲ್ ಹಾಕಿದ್ದರು. ಅಂಗಳದಲ್ಲಿ ಒಂದು ದಿವಾನದಲ್ಲಿ ನಿರ್ಜೀವ ದೇಹವನ್ನು ಮಲಗಿಸಿದ್ದರು. ಮನೆಯೊಳಗೇ ಹಾಲಿನಲ್ಲಿ ಗಿರಿಜೆ ಕುಳಿತಿದ್ದರು. ಒಂದಷ್ಟು ಮಂದಿ ಸಂಬಂಧಿಕರು ಅತ್ಯಾಪ್ತರು.**

■ **ಕೆ.ವಿ. ರಾಜಲಕ್ಷ್ಮಿ**
ಕಲೆ: ಭಾಸ್ಕರ್ ಎಲ್

# ಬೆಳದಿಂಗಳು



ಕಥೆಯ ಶೀರ್ಷಿಕೆ ಅರ್ಥವಾಗದವಳು; ಸರಿಯಾಗಿದೆಯೇ ಎಂಬ ಸಂದೇಹ ಬಂತು. ಅಥವಾ ಓಡಿಹೋದವಳ ಕಥೆ, ವ್ಯಥೆ ಎಂದು ಬದಲಿಸಲೆ ಎಂಬ ಆಲೋಚನೆ. ಯಾವುದಕ್ಕೂ ಕಥೆಯನ್ನು ಮತ್ತೊಮ್ಮೆ ಓದಿ ನಂತರ ಅಂತಿಮಗೊಳಿಸುವುದು. ಹಾಗೆಯೇ, ಟಂಕಿಸುವ ವೇಗದಲ್ಲಿ ಅಪ್ರಜ್ಞಾಪೂರ್ವಕವಾಗಿ ನುಸುಳಿರುವ ಕಾಗುಣಿತಗಳು, ಅನರ್ಥ ಶಬ್ದಗಳನ್ನು ಶೋಧಿಸಿ, ಸರಿಪಡಿಸಿ ಶುದ್ಧ ಪ್ರತಿಯಾಗಿಸಿ ನಂತರ ಪಿಡಿಎಫ್ ಮಾಡಬೇಕು. ಮರೆಯದೇ, ಇದ್ದ ಒಂದೇ ಮೊಬೈಲನ್ನು ಟೇಬಲ್ಲಿನ ಒಂದು ಬದಿಗೆ ಇಟ್ಟೆ. ಹೊಡಕೊಂಡ್ರೆ ಕುಳಿತಲ್ಲಿಯೇ ನೋಡಬಹುದು ಮೆಸೇಜೋ, ಕಾಲೋ... ಉತ್ತರಿಸುವ ಕರೆಗಳು ವಿರಳ ಬರುವುದೆಲ್ಲಾ ವಿಮೆಯವರದ್ದೋ ಇಲ್ಲ ಇನ್ನ್ಯಾವುದಾದರೂ ಪ್ರಾಡಕ್ಟ್ ಪ್ರೊಮೋಟ್ ಮಾಡುವವರದ್ದು. ವೈಯುಕ್ತಿಕ ಕರೆ ಎಂದರೆ ವಿದೇಶದಲ್ಲಿರುವ ಮಗಳು ಅವನಿ. ಅವಳ ಕರೆ ಎಂದರೆ ರಾತ್ರಿ ಪಾಳಿ. ಅಥವಾ ನಿಕಟ ಗೆಳತಿ ಸರೋಜಿನಿ, ಅವಳು ಕರೆ ಮಾಡುವ ಮೊದಲು ಸಂದೇಶ ಕಳುಹಿಸಿ ನಾನು ಹೂಂ ಎಂದರೆ ಮಾತ್ರವೇ ಲೈನಿಗೆ ಬರುವುದು. ಇನ್ಯಾರ ಕರೆಯನ್ನೂ ಅಷ್ಟು ಗಂಭೀರವಾಗಿ ತೆಗೆದುಕೊಳ್ಳುವ ಅವಶ್ಯಕತೆಯಿಲ್ಲ.

ಅಬ್ಬಬ್ಬಾಅಂದರೆ ಎರಡು ನಿಮಿಷ. ಅರ್ಧ ತುಂಬಿದ್ದ ನೀರಿನ ಬಾಟಲನ್ನು ತುಂಬಿಸಿ ಇಟ್ಟುಕೊಂಡೆ. ನೀರು ಬೇಕೆಂದರೆ ಮಧ್ಯೆ ಎದ್ದು ಹೋಗೋಕ್ಕಾಗೋಲ್ಲವಲ್ಲ? ಮೊದಲ ಪುಟ ತೆರೆದುಕೊಂಡಿತು. ಇಡೀ ಟೆಕ್ಸ್ಟ್ ಅನ್ನು ಸೆಲೆಕ್ಟ್ ಮಾಡಿ ಫಾಂಟ್ 16ಕ್ಕೆ ಹೆಚ್ಚಿಸಿಕೊಂಡೆ. ಓದಲು ಹೆಚ್ಚು ಆರಾಮ. ಚಾಲೀಸಾ ಸುಲೋಚನಾ ಬಂದು ಹತ್ತು ವರ್ಷಗಳಾಗಿ ಹೋಯ್ತುಲ್ಲ! ಓದುವ ಕೈಂಕರ್ಯ ಶುರುವಿಟ್ಟುಕೊಂಡೆ. ಎರಡು ಪುಟ ಮುಗಿಸಲು ಹತ್ತು ನಿಮಿಷಗಳ ಮೇಲೆ ಹಿಡಿದಿತ್ತು. ವೈಯಕ್ತಿಕ ಮೆಸೇಜ್ ಬಂದ ಸೂಚನೆ ವಿಷಯ ಗೊತ್ತಾಯ್ತಾ? ನಮ್ಮ ಕಾಲೋನಿಯ ವಾಟ್ಸಾಪ್ ಗುಂಪಿನ ಗೆಳತಿ ಶ್ರೀಪ್ರದ ಟೆಕ್ಸ್ಟ್ ಮಾಡಿದ್ದಳು. ಇಲ್ಲ ಎಂದು ಉತ್ತರಿಸಿದೆ. ಗ್ರೂಪ್‌ನಲ್ಲಿ ನೋಡು ವಾಟ್ಸಾಪ್ ಗುಂಪುಗಳನ್ನು ಮ್ಯೂಟ್ ಮೋಡ್‌ನಲ್ಲಿರಿಸಿದ್ದರಿಂದ ಗಮನಕ್ಕೆ ಬಂದಿರಲಿಲ್ಲ. ಕುತೂಹಲದಿಂದ ನೋಡಿದೆ. ಬಳಗದ ಸದಸ್ಯೆ ಗಿರಿಜೆಯ ಪತಿ ತೀರಿಕೊಂಡ ಸುದ್ದಿ. ಯಾರೋ ಹಾಕಿದ್ದ ಓಂ ಶಾಂತಿ ಮೆಸೇಜನ್ನೇ ಕಾಪಿ ಪೇಸ್ಟ್ ಮಾಡಿದೆ. ಆಕೆ ಪರಿಚಿತಳೇ ಹೊರತು ಸಲುಗೆ ಇರಲಿಲ್ಲ. ಹಬ್ಬ ಹರಿದಿನ ಅಥವಾ ಬಳಗದವರ ಸಣ್ಣ ಪುಟ್ಟ ಸಮಾರಂಭ ಅಂದರೆ ಒಂದು ಕಡೆ ಸೇರ್ತಿದ್ದದ್ದು, ಕಂಡರೆ ಒಂದು ಮುಗುಳುನಗೆ